## ಬಾಳೆ ಬೆಳೆಯ ಸುಧಾರಿತ ಬೇಸಾಯ ಕ್ರಮಗಳು

ಭಾರತದಲ್ಲಿ ಮಾವಿನ ನಂತರ ನಮ್ಮ ದೇಶದ ಪ್ರಮುಖ ಹಣ್ಣಿನ ಬೆಳೆ ಇದಾಗಿದ್ದು, ಉತ್ಪಾದನೆ ಮತ್ತು ಇಳುವರಿಯಲ್ಲಿ ಎರಡನೇ ಸ್ಥಾನ ಪಡೆದಿದೆ. ಪ್ರತಿಯೊಬ್ಬರೂ ತಿನ್ನಲು ಬಯಸುವ ಬಾಳೆಹಣ್ಣು ಕೆಲ ಖನಿಜಾಂಶಗಳು ಹಾಗೂ ಜೀವಸತ್ವಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಹೊಂದಿದೆ. ಶೇಕಡಾ 27 ರಷ್ಟು ಶರ್ಕರಪಿಷ್ಟವನ್ನು ಹೊಂದಿದ್ದು, ಶಕ್ತಿಯ ಆಗರವಾಗಿದೆ. ಬಾಳೆಯನ್ನು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 3895 ಹೆಕ್ಟೇರ್ ಪ್ರದೇಶದಲ್ಲಿ ಅಂತರ ಬೆಳೆಯಾಗಿ ಬೆಳೆಯುತ್ತಿದ್ದು 74100 ಮಿ.ಟನ್. ಹಣ್ಣನ್ನು ಉತ್ಪಾದಿಸಲಾಗುತ್ತಿದೆ.

**ಮಣ್ಣು:** ಈ ಬೆಳೆಯನ್ನು ಚೆನ್ನಾಗಿ ನೀರು ಬಸಿದು ಹೋಗುವಂತಹ ಕೆಂಪುಗೋಡು ಮಣ್ಣಿನಿಂದ ಹಿಡಿದು ಕಪ್ಪು ಮಣ್ಣಿನಲ್ಲಿಯೂ ಸಹ ಬೆಳೆಯಬಹುದು. ತೇವಾಂಶವನ್ನು ಹೆಚ್ಚುಕಾಲ ಕಾಯ್ದಿಟ್ಟುಕೊಳ್ಳುವಂತಹ ಹೆಚ್ಚು ಸಾವಯವ ಅಂಶವವಿರುವ ಮಣ್ಣು ಈ ಬೆಳೆಗೆ ಸೂಕ್ತ. ಬಾಳೆಯನ್ನು ನೀರಾವರಿ ಅನುಕೂಲವಿರುವ ಎಲ್ಲಾ ಕಡೆ ಬೆಳೆಯಬಹುದು.

**ನಾಟಿಕಾಲ:** ಚಳಿಗಾಲವನ್ನು ಹೊರತುಪಡಿಸಿ ಬಾಳೆಯನ್ನು ವರ್ಷದ ಯಾವುದೇ ಕಾಲದಲ್ಲಿ ನಾಟಿ ಮಾಡಬಹುದಾದರೂ, ಜೂನ್–ಜುಲೈ ತಿಂಗಳು ಸೂಕ್ತ.

**ತಳಿಗಳು:** ಭಾರತದಲ್ಲಿ 50 ಕ್ಕೂ ಹೆಚ್ಚು ತಳಿಗಳನ್ನು ವಿವಿಧ ಭಾಗಗಳಲ್ಲಿ ಬೆಳೆಯಲಾಗುತ್ತಿದ್ದು, ಕೆಳಗೆ ತಿಳಿಸಿದ ಕೆಲ ತಳಿಗಳು ನಮ್ಮ ರಾಜ್ಯದಲ್ಲಿ ಜನಪ್ರಿಯವಾಗಿವೆ.

**ಪೂವನ್ (ಸುಗಂಧಿ):** ಇದು ಸಾಮಾನ್ಯವಾಗಿ ಎಲ್ಲಾ ಕಡೆ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತಿರುವ ತಳಿ. ಗಿಡ ಎತ್ತರವಾಗಿದ್ದು, ತೆಳು ಸಿಪ್ಪೆಯಿಂದ ಕೂಡಿದ ಚಿಕ್ಕ ಗಾತ್ರದ ಹಣ್ಣುಗಳನ್ನು ಹೊಂದಿರುತ್ತದೆ. ಪ್ರತಿಯೊಂದು ಗೊನೆಯಲ್ಲಿ ಸರಾಸರಿ ೨೨೫ ಹಣ್ಣುಗಳಿರುತ್ತವೆ. ಹಣ್ಣುಗಳು ಸ್ವಲ್ಪ ಹುಳಿಯಾಗಿದ್ದರೂ ತಿನ್ನಲು ರುಚಿಕರವಾಗಿರುತ್ತವೆ. ಹಣ್ಣಿನ ತಿರುಳಿನಲ್ಲಿ ಅಭಿವೃದ್ಧಿ ಹೊಂದಿದ ಚಿಕ್ಕ ಬೀಜಗಳೂ ಕೂಡಾ ಇರುತ್ತವೆ. ಈ ತಳಿಯು ಪನಾಮಾ ಸೊರಗು ರೋಗ ಮತ್ತು ಎಲೆಚುಕ್ಕೆ ರೋಗಗಳಿಗೆ ಪ್ರತಿರೋಧಕ ಶಕ್ತಿಯನ್ನು ಹೊಂದಿದ್ದು, ನಮ್ಮ ರಾಜ್ಯದ ಜನಪ್ರಿಯ ತಳಿಗಳಲ್ಲೊಂದಾಗಿದೆ.

**ಪಚ್ಚ ಬಾಳೆ (ಡ್ವಾರ್ಫ್ ಕ್ಯಾವೆಂಡಿಷ್):** ಇದು ನಮ್ಮ ರಾಜ್ಯದ ಮತ್ತೊಂದು ಜನಪ್ರಿಯ ತಳಿಯಾಗಿದೆ. ಗಿಡಗಳು ಗಿಡ್ಡವಾಗಿ ಸುಮಾರು ಅಡಿ ಎತ್ತರವಾಗಿರುತ್ತವೆ. ಈ ತಳಿ ಹೆಚ್ಚು ಗಾಳಿ ಮತ್ತು ಉಷ್ಣ ವಾತಾವರಣವನ್ನು ಸಹಿಸಬಲ್ಲದು. ಹಣ್ಣುಗಳು ದೊಡ್ಡವಾಗಿದ್ದು ತುದಿಯಲ್ಲಿ ಬಾಗಿರುತ್ತವೆ. ಇದರ, ತಿರುಳು ಮೃದುವಾಗಿದ್ದು, ಸಿಹಿಯಾಗಿರುತ್ತದೆ. ಚೆನ್ನಾಗಿ ಬೆಳೆದ ಗೊನೆಯಲ್ಲಿ ಸುಮಾರು 125 ಹಣ್ಣುಗಳು ಇರುತ್ತವೆ. ಈ ತಳಿಯು ಪನಾಮಾ ಸೊರಗು ರೋಗ ನಿರೋಧಕವಾಗಿದ್ದು, ರಫ್ತು ಸಾಮರ್ಥ್ಯವನ್ನು ಪಡೆದಿದೆ.

**ರೋಬಸ್ಟಾ :** ಇದು ಮಧ್ಯಮ ಎತ್ತರದ ತಳಿಯಾಗಿದ್ದು **"ಕ್ಯಾವೆಂಡಿಷ್"** ಗುಂಪಿಗೆ ಸೇರಿದೆ. ದೊಡ್ಡ ಗಾತ್ರದ ಹೆಚ್ಚು ಹಣ್ಣುಗಳುಳ್ಳ ಗೊನೆಗಳನ್ನು ಕೊಡುತ್ತದೆ. ಹಣ್ಣುಗಳು ನೆಟ್ಟಗೆ ಇದ್ದು, ಗೊನೆಯು ಸಿಲಿಂಡರ್ ಆಕಾರವಾಗಿರುತ್ತದೆ. ಆದ್ದರಿಂದ ರಫ್ತು ಮಾಡಲು ಸೂಕ್ತವಾಗಿದೆ. ಪನಾಮಾ ಸೊರಗು ರೋಗಕ್ಕೆ ನಿರೋಧಕ ಶಕ್ತಿಯನ್ನು ಹೊಂದಿದೆ.

**ಗ್ರ್ಯಾಂಡ್ ನೈನ್ (ಜಿ–9) :** ಇದು ಮಧ್ಯಮ ಎತ್ತರದ ತಳಿಯಾಗಿದ್ದು **"ಕ್ಯಾವೆಂಡಿಶ್"** ಗುಂಪಿಗೆ ಸೇರಿದೆ. ಹಣ್ಣುಗಳ ಗಾತ್ರ ರೋಬಸ್ಟ್‌ಗಿಂತ ಹೆಚ್ಚು ದೊಡ್ಡದಾಗಿರುತ್ತದೆ. ಹಣ್ಣುಗಳು ನೆಟ್ಟಗೆ ಇದ್ದು ಗೊನೆಯು ಸಿಲಿಂಡರ್ ಆಕಾರವಾಗಿರುತ್ತದೆ. ಆದ್ದರಿಂದ ರಫ್ತು ಮಾಡಲು ಸೂಕ್ತವಾಗಿದೆ. ಪನಾಮಾ ಸೊರಗು ರೋಗಕ್ಕೆ ನಿರೋಧಕ ಶಕ್ತಿಯನ್ನು ಹೊಂದಿದೆ.

**ರಸಬಾಳೆ :** ಇದು ಅತ್ಯಂತ ಸ್ವಾದಿಷ್ಟ ತಳಿಗಳಲ್ಲೊಂದಾಗಿದ್ದು, ಗಿಡ 8 ರಿಂದ 9 ಅಡಿ ಎತ್ತರ ಬೆಳೆಯುವುದು. ಮಧ್ಯಮ ಗಾತ್ರದ ಗಟ್ಟಿ ತಿರುಳಿನ ಆಕರ್ಷಕ ಹಳದಿ ವರ್ಣದ, ತೆಳು ಸಿಪ್ಪೆ ಹೊಂದಿದ ರುಚಿಕರವಾದ ಹಣ್ಣನ್ನು ಕೊಡುತ್ತದೆ. ಚೆನ್ನಾಗಿ ಬೆಳೆದ ಗೊನೆಯಲ್ಲಿ ಸುಮಾರು 125 ಹಣ್ಣುಗಳಿರುತ್ತವೆ. ಈ ತಳಿಯು ಭೈಗೋಳಿಕ ಗುರುತು ಚೀಟಿ ಪಟ್ಟಿ ಪಡೆದಿದ್ದು, ರಾಜ್ಯದ ಮೈಸೂರು ಜಿಲ್ಲೆ ಮಾತ್ರ ಬೆಳೆಯಲಾಗುತ್ತದೆ

**ರಾಜಾಪುರಿ (ಜವಾರಿ / ಗುಜರಾತಿ / ವಲ್ಲಾ) :** ಇದು ಸ್ಥಳೀಯ ಬಾಳೆ ತಳಿಯಾಗಿದ್ದು, ಬೆಳಗಾವಿ ಜಿಲ್ಲೆಯ ಮುನವಳ್ಳಿ, ಸವದತ್ತಿ ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯಲಾಗುತ್ತಿದೆ. ಗಿಡ್ಡ ತಳಿಯಾಗಿದ್ದು, ಗೊನೆಯು ಸುಮಾರು 10-15 ಕಿ.ಗ್ರಾಂ. ತೂಕವಿದ್ದು, ಹಣ್ಣುಗಳು ಹೆಚ್ಚು ರುಚಿಯಾಗಿರುತ್ತವೆ. ಪ್ರತಿ ಗೊನೆಯು ಸುಮಾರು 8-10 ಹಣಿಗೆಗಳನ್ನು ಹಾಗೂ 90-110 ಹಣ್ಣುಗಳನ್ನು ಹೊಂದಿರುತ್ತದೆ.

**ಏಲಕ್ಕಿ ಬಾಳೆ / ಪುಟ್ಟಬಾಳೆ/ ಮಿಟ್ಲಿಬಾಳೆ :** ಮಧುರವಾದ ರುಚಿ, ಸಿಹಿ ಮತ್ತು ಉತ್ತಮ ಶೇಖರಣಾ ಗುಣಮಟ್ಟವನ್ನು ಹೊಂದಿರುವ ತಳಿ, ಗಿಡ ಎತ್ತರವಾಗಿದ್ದು, 13 ರಿಂದ 14 ತಿಂಗಳಲ್ಲಿ ಕಟಾವಿಗೆ ಬರುವುದು. ಗೊನೆಯು 10 ರಿಂದ 14 ಕಿ.ಗ್ರಾಂ. ಇದ್ದು, 150 ರಿಂದ 160 ಹಣ್ಣುಗಳನ್ನು ಹೊಂದಿರುತ್ತದೆ. ಪ್ರತಿ ಗೊನೆಯಲ್ಲಿ ೭ ರಿಂದ ೮ ಹಣಿಗೆಗಳು ಇರುತ್ತದೆ. ಹಣ್ಣುಗಳು ಚಿಕ್ಕದಾಗಿದ್ದು, ಹಳದಿ ಬಣ್ಣದ ತೆಳುವಾದ ಸಿಪ್ಪೆ ಹಾಗೂ ತಿರುಳು ಕೆನೆ ಬಣ್ಣದಿಮದ ಕುಡಿರುತ್ತದೆ. ಇದು ಬರೋಯಿಂಗ್ ಸಸ್ಯ ಜಂತು ರೋಗ ನಿರೋಧಕತೆಯನ್ನು ಹೊಂದಿದೆ.

**ನೇಂದ್ರನ್:** ಇದು ಅಡುಗೆಗೆ ಹಾಗೂ ತಿನ್ನುವುದಕ್ಕೆ ಯೋಗ್ಯವಾದ ತಳಿ. ಇದರಲ್ಲಿ ಹಣ್ಣುಗಳು 30 ಸೆಂ. ಮೀ.ಗೂ ಹೆಚ್ಚು ಉದ್ದವಾಗಿದ್ದು ಏಣುಗಳಿಂದ ಕೂಡಿರುತ್ತದೆ. ತಿರುಳು ರುಚಿಯಾಗಿರುತ್ತದೆ. ಉಪ್ಪೇರಿ (ಚಿಪ್ಸ್) ಮಾಡಲು ಬಹಳ ಯೋಗ್ಯವಾದ ತಳಿ.

**ಮಧುರಂಗ:** ಇದನ್ನು ಹೆಚ್ಚಾಗಿ ಅಡುಗೆಗೆ ಬಳಸಲು ಬೆಳೆಯುತ್ತಿರುವ ತಳಿ. ಈ ತಳಿಯ ಗಿಡಗಳು ಎತ್ತರವಾಗಿ ಬೆಳೆಯುತ್ತವೆ. ಕಾಯಿ ಗಾತ್ರದಲ್ಲಿ ದೊಡ್ಡದಾಗಿರುವುದಲ್ಲದೆ ಏಣುಗಳಿಂದ ಕೂಡಿರುತ್ತದೆ. ಉತ್ತಮವಾಗಿ ಬೆಳೆದ ಗೊನೆಯಲ್ಲಿ ಸುಮಾರು 100 ಹಣ್ಣುಗಳಿರುತ್ತವೆ.

**ಬೇಸಾಯ ಸಾಮಾಗ್ರಿಗಳು**

| ಅಂತರ (ಅಡಿ) | ಕಂದುಗಳು/ಎಕರೆಗೆ |
|---|---|
| 6 x 6 | 1210 (ಪಚ್ಚಬಾಳೆ) |
| 7 x 6 | 1037 (ರೋಬಸ್ಟಾ) |
| 7 x 7 | 889 (ರೋಬಸ್ಟಾ) |

**ಕೊಟ್ಟಿಗೆ/ ಕಾಂಪೋಸ್ಟ್ ಗೊಬ್ಬರ:** ನಾಟಿಗೆ ಮುಂಚೆ 16 ಕಿ.ಗ್ರಾಂ/ಎಕರೆ

| ರಾಸಾಯನಿಕ ಗೊಬ್ಬರಗಳು | ಸಾರಜನಕ | ರಂಜಕ | ಪೊಟ್ಯಾಷ್ |
|---|---|---|---|
| ಕಂದು ಬಾಳೆ(ಗ್ರಾಂ/ಗಿಡಕ್ಕೆ) | 175 | 105 | 220 |
| ಪಚ್ಚಬಾಳೆ/ರೋಬಸ್ಟಾ (ಕಿ.ಗ್ರಾಂ./ಎಕರೆಗೆ) | 216 | 130 | 270 |
| ಇತರೆ ತಳಿಗಳು (ಕಿ.ಗ್ರಾಂ/ಎಕರೆಗೆ) | 160 | 96 | 200 |
| ಅಂಗಾಂಶ ಬಾಳೆ (ಗ್ರಾಂ./ಗಿಡಕ್ಕೆ) | 80 | 40 | 120 |

(**ಸೂಚನೆ :** ಮಣ್ಣು ವಿಶ್ಲೇಷಣೆ ಆಧಾರದ ಮೇಲೆ ಗೊಬ್ಬರಗಳ ಪ್ರಮಾಣವನ್ನು ಮಾರ್ಪಡಿಸಬಹುದು.)

**ನಾಟಿಗೆ ಬಳಸುವ ಕಂದುಗಳು :** ಬಾಳೆಯನ್ನು ನಾಟಿಮಾಡಲು ಸೂಕ್ತವಿರುವ ಕಂದುಗಳನ್ನು ಅಥವಾ ಅಂಗಾಂಶ ಸಸಿಗಳನ್ನು ಉಪಯೋಗಿಸಬೇಕು. ಬಾಳೆ ಕಂದುಗಳನ್ನು ೨ ಗುಂಪುಗಳಾಗಿ ವಿಂಗಡಿಸಬಹುದು. ಮೊದಲನೆಯದು ಕತ್ತಿ ಕಂದು. ಈ ಕಂದುಗಳಲ್ಲಿ ಎಲೆಗಳು ಕತ್ತಿಯ ಆಕಾರದಲ್ಲಿ ಉದ್ದಕ್ಕಿರುತ್ತವೆ. ಎರಡನೆಯದು ನೀರು ಕಂದು. ಇದರಲ್ಲಿ ಪ್ರಾರಂಭದಲ್ಲೇ ಎಲೆಗಳು ಅಗಲವಾಗಿ ಹರಡಿರುತ್ತವೆ. ಹೊಸದಾಗಿ ಬಾಳೆತೋಟ ಪ್ರಾರಂಭ ಮಾಡಲು ಕತ್ತಿ ಕಂದುಗಳನ್ನು ಬಳಸಬೇಕು. ಇವು ಉತ್ತಮ ದರ್ಜೆಯ ಗೊನೆಗಳನ್ನು ಬಿಡಬಲ್ಲವು. ನೀರು ಕಂದುಗಳನ್ನು ಬಳಸಬಾರದು. ಇವುಗಳಿಂದ ಬೆಳೆ ಸ್ವಲ್ಪ ತಡವಾಗಿ ಬರುವುದಲ್ಲದೆ ಉತ್ತಮ ದರ್ಜೆಯ ಗೊನೆಗಳು ಬರುವುದಿಲ್ಲ. ಚೆನ್ನಾಗಿರುವ, ಉತ್ತಮ ಬಗೆಯ ಹಾಗೂ ರೋಗರಹಿತವಿರುವ ಅಂಗಾಂಶ ಸಸಿಗಳನ್ನು ಸಹ ಉಪಯೋಗಿಸಬಹುದಾಗಿದೆ.

**ನಾಟಿ ಮಾಡುವುದು:** ಬಾಳೆಯನ್ನು ನಾಟಿ ಮಾಡಬೇಕೆಂದಿರುವ ಪ್ರದೇಶವನ್ನು ಎರಡು ಅಥವಾ ಮೂರು ಸಾರಿ ಉಳುಮೆ ಮಾಡಿ, ಭೂಮಿಯನ್ನು ಹದ ಮಾಡಿಟ್ಟುಕೊಳ್ಳಬೇಕು ನಂತರ ತಳಿಗಳಿಗನುಗುಣವಾಗಿ ಶಿಫಾರಸ್ಸು ಮಾಡಿದ ಅಂತರದಲ್ಲಿ 1.5 ಘನ ಅಡಿ ಗಾತ್ರದ ಗುಣಿಗಳನ್ನು ತೆಗೆಯಬೇಕು. ಈ ಗುಣಿಗಳಲ್ಲಿ ಕಳಿತ ಹಾಗೂ ಸಮಪ್ರಮಾಣದಲ್ಲಿ ಬೆರೆಸಿದ ಕೊಟ್ಟಿಗೆ ಗೊಬ್ಬರ/ ಕಾಂಪೋಸ್ಟ್ ಮತ್ತು ಮೇಲ್ಮಣ್ಣುಗಳ ಮಿಶ್ರಣವನ್ನು ಹರಡಿ ತುಂಬಬೇಕು. ನಾಟಿ ಮಾಡಲು ಕೇವಲ ಕತ್ತಿ ಆಕಾರದ ಸಮ ವಯಸ್ಸಿನ ಕಂದುಗಳನ್ನು ಬಳಸಬೇಕಲ್ಲದೇ, ಬಂಚಿಟಾಪ್ ಮತ್ತು ನಂಜುರೋಗ ಮುಕ್ತವಿರುವ ತಾಯಿ ಗಿಡದಿಂದ

ಕಂದುಗಳನ್ನು ಆಯ್ಕೆ ಮಾಡಬೇಕು. ನಾಟಿ ಮಾಡಿದ ಕೊಡಲೇ ನೀರುಣಿಸಬೇಕು. ನಂತರ ಮಣ್ಣು ಮತ್ತು ಹವಾಗುಣಕ್ಕನುಸಾರವಾಗಿ ಪ್ರತಿ 4-5 ದಿನಗಳಿಗೊಮ್ಮೆ ನೀರು ಹಾಯಿಸಬೇಕು. ಬಾಳೆಯಲ್ಲಿ (ಶೇ. 80 ರಷ್ಟು ಬಾಷ್ಪೀಕರಣ) ಮೊದಲನೆಯ ಹಂತದಲ್ಲಿ ಪ್ರತಿ ದಿವಸ 8 ರಿಂದ 12 ಲೀಟರ್ ಹಾಗೂ ನಾಲ್ಕನೆಯ ಹಂತದಲ್ಲಿ 19 ರಿಂದ 25 ಲೀಟರ್ ನೀರು ಹಾಗೂ (ಶೇ. 70 ರಷ್ಟು ಬಾಷ್ಪೀಕರಣ) ಎರಡನೆಯ ಹಂತದಲ್ಲಿ 13 ರಿಂದ 18 ಲೀಟರ್ ಹಾಗೂ ಮೂರನೆಯ ಹಂತದಲ್ಲಿ 19 ರಿಂದ ೨೫ ಲೀಟರ್ ನೀರು ಪ್ರತಿ ದಿವಸ ಬಾಷ್ಪೀಕರಿಸುವುದರಿಂದ ಹೆಚ್ಚಿನ ಇಳುವರಿ ಪಡೆಯಬಹುದು.

**ನಾಟಿ ನಂತರದ ಬೇಸಾಯ :** ತಾಯಿ ಗಿಡ ಹೂವು ಬಿಡುವ ತನಕ ಬುಡದಿಂದ ಬರುವ ಎಲ್ಲಾ ಮರಿ ಕಂದುಗಳನ್ನು ಆಗಿಂದಾಗ್ಗೆ ತೆಗೆಯುತ್ತಿರಬೇಕು. ನಂತರ ಕೂಳೆ ಬೆಳೆಗಾಗಿ ಕೇವಲ ಒಂದು ಕಂದನ್ನು ಬಿಡುವುದರಿಂದ ಸಿಗಟೋಕಾ ಎಲೆ ಚುಕ್ಕೆ ರೋಗದ ಬಾಧೆ ಕಡಿಮೆಯಾಗುತ್ತದೆ. ಕಂದುಗಳಿಂದ ಬೆಳೆಸಿದ ಬಾಳೆಗೆ ಶಿಫಾರಸ್ಸು ಮಾಡಿದ ಪ್ರಮಾಣದಲ್ಲಿ ರಸಗೊಬ್ಬರಗಳನ್ನು ನಾಟಿ ಮಾಡಿದ 2ನೇ, 4ನೇ ಮತ್ತು 6ನೇ ತಿಂಗಳಿನ ನಂತರ ಮೂರು ಸಮ ಕಂತುಗಳಲ್ಲಿ ಕೊಡಬೇಕು. ಅಂಗಾಂಶ ಬಾಳೆಗೆ ಕೋಷ್ಟಕದಲ್ಲಿ ತಿಳಿಸಿದ ಹಂತಗಳಿಗೆ ಅನುಗುಣವಾಗಿ ರಸಗೊಬ್ಬರಗಳನ್ನು ಒದಗಿಸಬೇಕು. ಬೆಳೆ ಪ್ರದೇಶವನ್ನು 2-3 ಸಲ ಅಗೆತ ಮಾಡಿ ಮಣ್ಣನ್ನು ಸಡಿಲಗೊಳಿಸಿ ಕಳೆ ಬೆಳೆಯದಂತೆ ನೋಡಿಕೊಳ್ಳಬೇಕು. ಗೊನೆ ಬಂದ ನಂತರ ಬಾಳೆ ಗಿಡ ಗಾಳಿಯ ಹೊಡೆತದಿಂದ ಮತ್ತು ಗೊನೆಯ ಭಾರದಿಂದ ಮುರಿದು ಬೀಳದಂತೆ ಮಾಡಲು ಪ್ರತಿ ಗಿಡಕ್ಕೂ ಬಲಿಷ್ಠವಿರುವ ಕೋಲನ್ನು ಕಟ್ಟಿ ಆಸರೆ ಒದಗಿಸಬೇಕು. ಗೊನೆಯ ತುದಿಯಲ್ಲಿರುವ ಗಂಡು ಹೂ ಭಾಗವನ್ನು ಕೊನೆಯ ಚಿಪ್ಪಿನ ಕಾಯಿಗಳು ಕಚ್ಚಿದಾಗ ಕತ್ತರಿಸಬೇಕು. ಬಾಳೆ ತೋಟ ಪ್ರಾರಂಭ ಮಾಡಿದ ಮೊದಲ 3-4 ತಿಂಗಳು ಅಲ್ಪಾವಧಿ ತರಕಾರಿ ಬೆಳೆಗಳನ್ನು ಮತ್ತು ದ್ವಿದಳ ಧಾನ್ಯ ಬೆಳೆಗಳನ್ನು ಅಂತರ ಬೆಳೆಗಳನ್ನಾಗಿ ಬೆಳೆಯಬಹುದು.

**ಬಾಳೆಯ ಸ್ಪೆಷಲ್ ಬಳಕೆ :** ಬಾಳೆ ಸ್ಪೆಷಲ್ ಲಘು ಪೋಷಕಾಂಶಗಳ ಮಿಶ್ರಣವಾಗಿದ್ದು, ಇದನ್ನು ಭಾರತೀಯ ತೋಟಗಾರಿಕೆ ಸಂಶೋದನಾ ಸಂಸ್ಥೆ, ಬೆಂಗಳೂರು ರವರು ಅಭಿವೃದ್ಧಿ ಪಡೆಸಿರುತ್ತಾರೆ. ಬಾಳೆಯ ಅಧಿಕ ಇಳುವರಿಗಾಗಿ 75 ಗ್ರಾಂ. ಬಾಳೆಯ ಸ್ಪೆಷಲ್ (ಪ್ರತಿ ಲೀ. ನೀರಿಗೆ 5.0 ಗ್ರಾಂ ನಂತೆ) 15 ಲೀ. ನೀರಿನಲ್ಲಿ ಕರಗಿಸಿ, ಇದಕ್ಕೆ 2 ಮಿ. ಲೀಟರ್ ಸಾಬೂನು ದ್ರಾವಣ ಅಥವಾ ಮಾರುಕಟ್ಟೆಯಲ್ಲಿ ದೊರೆಯುವ ಒಂದು ರೂಪಾಯಿ ಬೆಲೆಯ ಶ್ಯಾಂಪು ಪೊಟ್ಟಣ ದ್ರಾವಣವನ್ನು ಹಾಗೂ ಒಂದು ನಿಂಬೆ ಹಣ್ಣಿನ ರಸವನ್ನು ಒಟ್ಟಿಗೆ ಬೆರೆಸಿ. 5 ಹಂತಗಳಲ್ಲಿ ಗಿಡ ನೆಟ್ಟ 5 ತಿಂಗಳ ನಂತರ ಸಿಂಪಡಿಸಬೇಕು. ಒಟ್ಟಾರೆ ಪ್ರತಿ ಎಕರೆಗೆ 10 ಕಿ.ಗ್ರಾಂ ಬಾಳೆ ಸ್ಪೆಷಲ್ ಬೇಕಾಗುತ್ತದೆ.

**ಬಾಳೆ ಗೊನೆಗಳಿಗೆ ನೇರವಾಗಿ ಪೋಷಕಾಂಶಗಳನ್ನು ಉಣಿಸುವುದು:**

ಗೊನೆಯ ಮೇಲ್ಬಾಗದ ಹಾಗೂ ಕೆಲಭಾಗದ ಚಿಪ್ಪುಗಳ ಕಾಯಿಗಳು ಪೋಷಕಾಂಶಗಳ ಪೈಪೋಟಿ ಹೊಂದಿ ಅಸಮರ್ಪಕವಾಗಿರುತ್ತವೆ. ಇದರ ಪರಿಣಾಮವಾಗಿ ಸರಾಸರಿ ಒಟ್ಟು ಇಳುವರಿ ಮತ್ತು ಅದಾಯದ ಮೇಲೆ ಪರಿಣಾಮ ಬೀರುತ್ತದೆ. ಈ ಸಮಸ್ಯೆಯನ್ನು ಪರಿಹರಿಸಲು ಭಾರತೀಯ ತೋಟಗಾರಿಕೆ ಸಂಶೋದನಾ ಸಂಸ್ಥೆ, ಬೆಂಗಳೂರು ರವರು

ಒಂದು ಕಡಿಮೆ ಖರ್ಚಿನ ನೇರವಾಗಿ ಬಾಳೆ ಗೊನೆಗಳಿಗೆ ಪೋಷಕಾಂಶಗಳನ್ನು ಉಣಿಸುವ ತಂತ್ರಜ್ಞಾನವನ್ನು ಅಭಿವೃದ್ಧಿ ಪಡೆಸಿದ್ದಾರೆ.

**ವಿಧಾನ:** ಗಂಡು ಹೂ (ಮೋತೆ) ಯನ್ನು ಚೂಪಾದ ಚಾಕುವಿನಿಂದ ಗೊನೆಯ ದಿಂಡಿನ ತೊಟ್ಟಿನಿಂದ ಸುಮಾರು ೧೫ ಸೆಂ.ಮೀ. ಭಾಗ ಬಿಟ್ಟು 60 ಡಿಗ್ರಿ ಕೋನದಲ್ಲಿ ಕತ್ತರಿಸಿ, 100 ಮಿ.ಲೀ ನೀರಿಗೆ ಅರ್ಧ ಕಿ.ಗ್ರಾಂ ನಾಟಿ ಹಸುವಿನ ಸಗಣಿಗೆ ಯೂರಿಯಾ ಮತ್ತು ಸಲ್ಫೇಟ್ ಅಪ್ ಪೋಟ್ಯಾಷ್ (ರೊಬಸ್ಟಾ ಬಾಳೆಗೆ 7.50 ಗ್ರಾಂ, ಎಲಕ್ಕಿಗೆ ತಳಿಗಾದರೆ 2.50 ಗ್ರಾಂ, ಗ್ರ್ಯಾಂಡ್ ನೈನ್ (ಜಿ–೯) ಗೆ 10 ಗ್ರಾಂ) ಅನ್ನು ಬೆರೆಸಿ 200 ಗೇಜ್ ಪಾಲಿಥೀನ್ ಚೀಲ ( 15x25 ಸೆಂ.ಮಿ ಅಳತೆ) ದಲ್ಲಿ ತುಂಬಿ ಗೊನೆಯ ದಿಂಡಿನ ತುದಿ ಭಾಗವನ್ನು ಮುಳುಗುವಂತೆ ದಾರದಲ್ಲಿ ಕಟ್ಟುವುದರಿಂದ ಕಾಯಿಗಳು ಒಂದೇ ಗಾತ್ರ ಮತ್ತು ಉತ್ತಮ ಗುಣಮಟ್ಟವುಳ್ಳವುದಾಗಿ ಮಾರುಕಟ್ಟೆಯಲ್ಲಿ ಉತ್ತಮ ಧಾರಣೆ ಪಡೆಯುತ್ತವೆ.

**ಸೂಚನೆ:**

೧. ಹಣ್ಣುಗಳ ಗಾತ್ರ ಮತ್ತು ತೂಕ ಹೆಚ್ಚಿಸಲು 2, 4-ಡಿ ಯನ್ನು (30 ಮಿ.ಗ್ರಾಂ. ಪ್ರತಿ ಲೀಟರ್ ನೀರಿಗೆ) ಪ್ರತಿ ಗೊನೆಗೂ 250 ಮಿ.ಲೀ. ಪ್ರಮಾಣದಲ್ಲಿ ಗೊನೆಯ ಕೊನೆಯ ಚಿಪ್ಪು ಹೊರ ಬಂದಾಗ ಸಿಂಪರಣೆ ಮಾಡಬೇಕು.

೨. ಬಾಳೆ ತೋಟದ ಸುತ್ತಲೂ ಗಾಳಿ ತಡೆಯಾಗಿ ಅಗಸೆಯನ್ನು ಎರಡು ಸಾಲುಗಳಲ್ಲಿ ಬೆಳೆಯಬೇಕು.

೩. ಸೊರಗು ರೋಗ ಬಾಧೆಗೆ ಒಳಗಾದ ಕ್ಷೇತ್ರದಲ್ಲಿ ಪುನ: ಹೊಸದಾಗಿ ಅದೇ ಬೆಳೆಯನ್ನು ಬೆಳೆಯಬಾರದು. ಎರಡು ವರ್ಷಗಳ ನಂತರ ಬೆಳೆಯಬಹುದು.

**ಗೊನೆಗಳ ರಕ್ಷಣೆಗೆ ಹೊದಿಕೆ ವಿಧಾನ: (ಃಚಿಟಿಛಿ ಅಚಿತಜಡಿಟಿಜ):** ಗೊನೆಗಳು ಬಲಿಯುವಾಗ ಬಿಸಿಲಿಗೆ ಸಿಕ್ಕಿ ಸುಟ್ಟಂತಾಗುವುದು ಮತ್ತು ಇತರೆ ಕೀಟ ಭಾದೆಯಿಂದ ಕಾಯಿಗಳ ಮೇಲೆ ವಿಕಾರ ಚುಕ್ಕೆಗಳು ಕಾಣುತ್ತವೆ. ಕೆಲವೊಮ್ಮೆ ಬಿಸಿಲಿನ ಶಾಖಕ್ಕೆ ಕಪ್ಪು ಬಣ್ಣಕ್ಕೆ ತಿರುಗಿ ಸೀಳುವುದುಂಟು. ಕಾರಣ ಫಸಲಿನ ಗುಣಮಟ್ಟ ಕೆಟ್ಟು ಸರಿಯಾದ ದಾರಣೆ ಸಿಗುವುದಿಲ್ಲ. ಈ ರೀತಿಯಾಗುವುದನ್ನು ತಪ್ಪಿಸಲು ಗೊನೆಗಳ ಮೇಲೆ ಬಾಳೆ ತರಗನ್ನು ಮಂದವಾಗಿ ಹೊದಿಸಿಕಟ್ಟಬೇಕು. ಕೆಲವೊಂದೆಡೆ ಗೋಣಿ ಚೀಲ ಕಟ್ಟುತ್ತಾರೆ. ಇತ್ತೀಚಿನ ದಿನಗಳಲ್ಲಿ ಹೊಸ ತಂತ್ರಜ್ಞಾನದಲ್ಲಿ ಪಾಲಿಥೀನ್ ಚೀಲಗಳನ್ನು ಬಳಸಿ ಗೊನೆಗಳನ್ನು ಈ ಚೀಲಗಳಲ್ಲಿ ಮುಳುಗಿಸಿ ಕಟ್ಟುವುದು ಪದ್ಧತಿ. ಇದರ ಚೀಲದ ಬೆಲೆ ರೂ. ೧೨ ಇದ್ದು ಇದನ್ನು ಎರಡು ಬೆಳೆಗೆ ಉಪಯೋಗಿಸಬಹುದು. ಇದರಿಂದ ಬಿಸಿಗಾಳಿ, ಧೂಳಿನ ಹಾವಳಿ ಮತ್ತು ಕೀಟ ಮತ್ತು ರೋಗದ ಹಾವಳಿ ತಪ್ಪಿ ಕಾಯಿಗಳ ಸಿಪ್ಪೆ ಒಂದೇ ತೆರೆನಾದ ಆಕರ್ಷಕ ಬಣ್ಣ ಹೊಂದಲು ಸಾಧ್ಯ.

**ಕೊಯ್ಲಿನ ನಂತರ ತಾಯಿ ಗಿಡವನ್ನು ಕತ್ತರಿಸಿ ಹಾಕುವುದು:** ಬಲಿತ ಗೊನೆಯನ್ನು ಕೊಯ್ಲು ಮಾಡುವ ಹಂತದಲ್ಲಿ ಇನ್ನೊಂದು ಮರಿ ಕಂದನ್ನು ಬೆಳೆಯಲು ಬಿಡಬೇಕು. ಗೊನೆಯನ್ನು ಕೊಯ್ಲು ಮಾಡಿದ ನಂತರ, ತಾಯಿ ಗಿಡವನ್ನು ಹಂತ ಹಂತವಾಗಿ 15 ರಿಂದ 20 ದಿನಗಳ ಅಂತರದಲ್ಲಿ ಕತ್ತರಿಸಿ ಹಾಕಬೇಕು. ಇದರಿಂದ ಬೆಳೆಯುತ್ತಿರುವ ಮರಿಗಿಡಗಳಿಗೆ ಪೋಷಕಾಂಶಗಳು ಲಭ್ಯವಾಗುತ್ತವೆ.

**ಬಾಳೆಯಲ್ಲಿ ಕೂಳೆ ಬೆಳೆ ನಿರ್ವಹಣೆ :** ಮಣ್ಣು, ಹವಾಗುಣ, ತಳಿ ಮತ್ತು ಅಂತರಗಳನ್ನು ಅವಲಂಬಿಸಿ ಬಾಳೆ ಬೆಳೆಯಲ್ಲಿ 2-3 ಕೂಳೆ ಬೆಳೆಗಳನ್ನು ಯಶಸ್ವಿಯಾಗಿ ಪಡೆಯಬಹುದಾಗಿದೆ. ರೋಬಸ್ಟಾ ಮತ್ತು ಡ್ವಾರ್ಫ್ ಕ್ಯಾವೆಂಡಿಷ್‌ಗಳು ಕೂಳೆ ಬೆಳೆಗೆ ಸೂಕ್ತ ತಳಿಗಳು. ಮುಖ್ಯ ಬಾಳೆ ಗಿಡವು ಹೂ ಗೊನೆ ಬಿಡುವವರೆಗೆ ಅಕ್ಕಪಕ್ಕದಲ್ಲಿ ಬರುವ ಮರಿ ಕಂದುಗಳನ್ನು ತೆಗೆದು ಹಾಕಬೇಕು. ಹೂ ಗೊನೆ ಬಿಡುವಾಗ ಒಂದು ಕತ್ತಿಯಾಕಾರಾದ ಕಂದು ಹಾಗೂ ಬಲಿತ ಗೊನೆ ಕೊಯ್ಲಾದ ನಂತರ ಇನ್ನೊಂದು ಕತ್ತಿಯಾಕಾರಾದ ಕಂದನ್ನು ಬೆಳೆಯಲು ಬಿಡಬೇಕು. ಗೊಬ್ಬರಗಳ ಪ್ರಮಾಣ ಕೂಳೆ ಬೆಳೆಗೆ ಬೇರೆ ಇರುತ್ತದೆ. ಕೂಳೆ ಬೆಳೆಗೆ 100 ಗ್ರಾಂ ಸಾರಜನಕ, 50 ಗ್ರಾಂ ರಂಜಕ ಮತ್ತು 100 ಗ್ರಾಂ ಪೊಟ್ಯಾಷ್ ಪ್ರತಿ ಗಿಡಕ್ಕೆ, ಪ್ರತಿ ಬೆಳೆಗೆ ಮೂರು ಕಂತುಗಳಲ್ಲಿ ಅಂದರೆ ಕೂಳೆ ಗಿಡ ಬಿಟ್ಟ 30, 75 ಮತ್ತು 120 ದಿನಗಳಲ್ಲಿ ಮುಖ್ಯ ಬೆಳೆ ಕಟಾವಿನ ನಂತರ ಕೊಡಬೇಕು. ಕೊಯ್ಲಿನ ನಂತರ ತಾಯಿ ಗಿಡವನ್ನು ಹಂತ ಹಂತವಾಗಿ ಕತ್ತರಿಸುವುದರಿಂದ, ಆ ಗಿಡದಲ್ಲಿನ ಉಳಿಕೆ ಪೋಷಕಾಂಶಗಳು ಕೂಳೆ ಕಂದುಗಳಿಗೆ ದೊರೆಯುತ್ತವೆ. ಎಲ್ಲಾ ಸಸ್ಯ ಉಳಿಕೆಗಳ ಸಾಲುಗಳ ಮಧ್ಯೆ, ಮಣ್ಣಿಗೆ ಹೊದಿಕೆಯಾಗಿ ಉಪಯೋಗಿಸಬಹುದು.

**ಕೊಯ್ಲು ಮತ್ತು ಇಳುವರಿ :** ತಳಿಗಳನ್ನು ಅವಲಂಬಿಸಿ ಮೊದಲ ಬೆಳೆ, ನಾಟಿ ಮಾಡಿದ 12 ರಿಂದ 14 ತಿಂಗಳ ನಂತರ ಕೊಯ್ಲಿಗೆ ಬರುತ್ತದೆ. ಕೂಳೆ ಬೆಳೆಯುವ ನಂತರ 6 ರಿಂದ 8 ತಿಂಗಳಲ್ಲಿ ಕೊಯ್ಲಿಗೆ ಬರುತ್ತದೆ. ಪಚ್ಚಬಾಳೆ 12 ರಿಂದ 16 ಟನ್/ಎಕರೆ, ರೋಬಸ್ಟ 15 ರಿಂದ 18 ಟನ್/ಎಕರೆ, ಇತರೆ 8 ರಿಂದ 12 ಟನ್/ಎಕರೆಗೆ ಹಣ್ಣುಗಳನ್ನು ನಿರೀಕ್ಷಿಸಬಹುದು.

| ಸಸ್ಯ ಸಂರಕ್ಷಣಾ ಕ್ರಮಗಳು | | |
|---|---|---|
| **ಮುಖ್ಯ ಕೀಟ ಪೀಡೆಗಳು** | **ಹಾನಿಯ ಚಿಹ್ನೆಗಳು** | **ಹತೋಟಿ ಕ್ರಮಗಳು** |
| ಸಸ್ಯ ಹೇನು | ನೂರಾರು ಸಸ್ಯ ಹೇನುಗಳು ಸುಳಿಯಲ್ಲಿ ಸೇರಿ ರಸ ಹೀರುತ್ತಿರುತ್ತವೆ. ಈ ಎಲೆಗಳು ಹಳದಿಬಣ್ಣಕ್ಕೆ ಮಾರ್ಪಡುತ್ತವೆ. ಎಲೆಗಳ ಮೇಲೆ ಕಪ್ಪು ಬೂಷ್ಟು, ಗೊಂಚಲು ಸುಳಿ ರೋಗ ಮುಂತಾಗಿ ಹರಡುತ್ತವೆ. | ಬಾಧೆ ಕಾಣಿಸಿಕೊಂಡಾಗ 0.5 ಮಿ.ಲೀ ಫ್ಯಾಸ್ಫಾಮಿಡಾನ್ 100 ಇಸಿ ಅಥವಾ 1.7 ಮಿ.ಲೀ ಡೈಮಿಥೊಯೇಟ್ 30 ಇಸಿ 0.3 ಅಥವಾ ಇಮಿಡಾಕ್ಲೋಪ್ರಿಡ್ 200 ಎಸ್.ಎಲ್ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸುವುದು; ಸಿಂಪರಣಾ ದ್ರಾವಣ ಸುಳಿಯಲ್ಲಿ ಬೀಳಬೇಕು. |
| ಗೆಡ್ಡೆಕೊರೆಯುವ ಹುಳು | ಮೂತಿ ಹುಳುಗಳ ಗೆಡ್ಡೆಗಳನ್ನು ಕೊರೆಯುತ್ತವೆ. ಗಿಡಗಳು ಹಳದಿ ಬಣ್ಣಕ್ಕೆ ತಿರುಗಿ, ಗಾಳಿ ಜೋರಾಗಿ ಬೀಸಿದಾಗ ಬುಡಭಾಗಕ್ಕೆ ಮುರಿಯುತ್ತವೆ. | 1. ಕಂದುಗಳನ್ನು ನಾಟಿ ಮಾಡುವಾಗ ಗೆಡ್ಡೆಗಳ ಮೇಲೆ ಈ ಹರಳು ರೂಪದ ಕೀಟನಾಶಕವನ್ನು ಬಳಸುವುದು.<br>2. ಗೆಡ್ಡೆ ಕೊರಕ ಪೀಡಿತ ಗೆಡ್ಡೆಗಳನ್ನು ಬಿತ್ತನೆಗೆ ಬಳಸಬಾರದು.<br>3. ಪ್ರತಿ ಗುಣಿಗೆ 10 ಗ್ರಾಂ. ಕಾರ್ಬೋಫ್ಯುರಾನ್ 3 ಜಿ ಅಥವಾ 5 ಗ್ರಾಂ ಫೋರೇಟ್ 10 ಜಿ. ಹರಳುಗಳನ್ನು ನಾಟಿಗೆ ಮುಂಚೆ ಮಣ್ಣಿನಲ್ಲಿ ಬೆರೆಸಬೇಕು |
| ಹುಸಿಕಾಂಡ ಕೊರಕ | ಮರಿ ಹುಳುಗಳು ಹುಸಿ ಕಾಂಡವನ್ನು ಕೊರೆಯುತ್ತವೆ. ಹುಸಿ ಕಾಂಡದ ಮೇಲೆ ರಂಧ್ರಗಳಿದ್ದು ಗಾಳಿಬೀಸಿದಾಗ ಮರಗಳು ಆ ಭಾಗಕ್ಕೆ ಸರಿಯಾಗಿ ಮುರಿಯುತ್ತವೆ. | ಕಾಂಡ ಕೊರೆಯುವ ಮೂತಿ ಹುಳುವಿನ ನಿಯಂತ್ರಣಕ್ಕಾಗಿ, ಗಡ್ಡೆ ನಾಟಿ ಮಾಡಿದ 6 ಅಥವಾ 7 ತಿಂಗಳುಗಳಲ್ಲಿ 5 ಮಿ.ಲೀ. ಕ್ಲೋರೋಪೈರಿಫಾಸ್ ಅಥವಾ ಡೈಮೀಥೋಯೇಟ್ 5 ಮಿ.ಲೀ. ನೀರಿನಲ್ಲಿ ಬೆರೆಸಿ ಕಾಂಡಕ್ಕೆ ಭೂಮಿಯಿಂದ ಒಂದು ಅಡಿ ಎತ್ತರಕ್ಕೆ ಚುಚ್ಚುಮದ್ದಿನ ಮೂಲಕ ಕೊಡಬೇಕು. (2–3 ಸೆಂ.ಮೀ. ಆಳ) ಅಥವಾ ಕ್ಲೋರೋಪೈರಿಫಾಸ್ 2.5 ಮಿ. ಲೀ.<br>ಪ್ರತಿ ಲೀಟರ್ ನೀರಿಗೆ ಬೆರೆಸಿ ಸಿಂಪಡಿಸಬೇಕು |
| **ರೋಗಗಳು** | **ಮುಖ್ಯ ಲಕ್ಷಣಗಳು** | **ಹತೋಟಿ ಕ್ರಮಗಳು** |
| ಪನಾಮ ಸೊರಗು ರೋಗ | ಗಿಡದ ಬುಡಭಾಗದಲ್ಲಿನ ಎಲೆಗಳು ಮೊದಲು ಹಳದಿ ಬಣ್ಣಕ್ಕೆ ತಿರುಗಿ, ಕ್ರಮೇಣ ಮೇಲಿನ ಎಲೆಗಳು ಹಳದಿಯಾಗಿ, ಪೂರ್ಣ ಗಿಡವು ಒಣಗುತ್ತದೆ. ಕಾಂಡವನ್ನು ಅಡ್ಡಕ್ಕೆ ಸೀಳಿ ನೋಡಿದಾಗ ಕಂದು ಬಣ್ಣದ ಕಲೆಗಳು ಕಂಡು ಬರುತ್ತವೆ. | ಕಂದುಗಳನ್ನು ಕಾರ್ಬನ್‌ಡಜಿಮ್ ಶಿಲೀಂಧ್ರನಾಶಕದ ದ್ರಾವಣದಿಂದ 4 ನಿಮಿಷಗಳ ಕಾಲ ಉಪಚರಿಸಿ ನೆಡಬೇಕು.<br>ಬಾಳೆ ತೋಟದಲ್ಲಿ ಪನಾಮ ಸೊರಗು ರೋಗ ಕಂಡು ಬಂದಲ್ಲಿ 1 ಲೀ. ನೀರಿನಲ್ಲಿ 20 ಗ್ರಾಂ ಕಾರ್ಬೆಂಡೈಜಿಂ ಬೆರೆಸಿದ ದ್ರಾವಣದಿಂದ 10 ಮಿ.ಲೀ. ದ್ರಾವಣವನ್ನು ಪಿಚಕಾರಿಯ ಸಹಾಯದಿಂದ ಗೆಡ್ಡೆಯಲ್ಲಿ 2 ಅಂಗುಲ ಆಳದ ರಂಧ್ರ ಮಾಡಿ ಅದಕ್ಕೆ ದ್ರಾವಣವನ್ನು ಹಾಕಿ, ನಂತರ ರಂಧ್ರವನ್ನು ಹಸಿ ಮಣ್ಣಿನಿಂದ ಮುಚ್ಚಬೇಕು. ಪ್ರತಿ 2 ತಿಂಗಳಿಗೊಮ್ಮೆ ಈ ರೀತಿ ಮಾಡಬೇಕು. ಪನಾಮ ಸೊರಗು ರೋಗ ನಿರೋಧಕ ತಳಿಗಳು– ರೋಬಸ್ಟ ಮತ್ತು ಡ್ವಾರ್ಫ್‌ಕ್ಯಾವೆಂಡಿಷ್. |

| | | |
|---|---|---|
| ಕಾಂಡಕೊಳೆಯುವ ರೋಗ | ಕಂದುಗಳ ಹಾಗೂ ಬೆಳೆದ ಗಿಡಗಳ ಕಾಂಡದ ಸುತ್ತಲೂ ನಶ್ಯದ ಪುಡಿಯ ಬಣ್ಣದ ಶಿಲೀಂಧ್ರ ಬೆಳೆವಣಿಗೆ ಕಂಡು ಬಂದು ಕಂದುಗಳ ಹಾಗೂ ಗಿಡಗಳ ಕಾಂಡವು ಕೊಳೆಯಲು ಪ್ರಾರಂಭಿಸುತ್ತದೆ. ನಂತರ ಪೂರ್ತಿಯಾಗಿ ಗಿಡವೇ ಕೊಳೆತು ನಾಶವಾಗುತ್ತದೆ. | 1) ಕಾಂಡಕೊಳೆಯುವ ರೋಗಕ್ಕೆ ತುತ್ತಾದ ಕಂದುಗಳ ಹೊರ ಕವಚದ ಎಲೆಗಳನ್ನು ತೆಗೆದು ಹಾಕಿ ಅವುಗಳನ್ನು ಬೋರ್ಡೊ ದ್ರಾವಣದಿಂದ ಉಪಚರಿಸಬೇಕು.<br>2) ಗೆಡ್ಡೆಯನ್ನು 3 ಗ್ರಾಂ ತಾಮ್ರದ ಆಕ್ಸಿಕ್ಲೋರೈಡ್ ಜೊತೆಗೆ<br>0.3 ಗ್ರಾಂ ಸ್ಟ್ರೆಪ್ಟೋಸೈಕ್ಲಿನ್. ಪ್ರತಿ ಲೀಟರ್ ನೀರಿಗೆ ಶಿಫಾರಸ್ಸಿನಂತೆ ತಯಾರಿಸಿದ ದ್ರಾವಣದಲ್ಲಿ 45 ನಿಮಿಷಗಳ ಕಾಲ ಅದ್ದಿ ನಾಟಿ ಮಾಡಬೇಕು.<br>3) ನಂತರ ಗಿಡದ ಬುಡದ ಸುತ್ತಲೂ 3 ಗ್ರಾಂ ತಾಮ್ರದ ಆಕ್ಸಿಕ್ಲೋರೈಡ್ ಜೊತೆಗೆ<br>0.3 ಗ್ರಾಂ ಸ್ಟ್ರೆಪ್ಟೋಸೈಕ್ಲಿನ್ ಪ್ರತಿ ಲೀಟರ್ ನೀರಿಗೆ ಬೆರೆಸಿದ ದ್ರಾವಣದಿಂದ ತಿಂಗಳಿಗೊಮ್ಮೆ ಮೂರು ಬಾರಿ ಸುರಿದು ತೊಯ್ಯಿಸಬೇಕು (ಡ್ರೆಂಚಿಂಗ್). |
| ಬಂಚಿಟಾಪ್ ನಂಜುರೋಗ | ಬಾಳೆ ಗಿಡವು ಗಿಡ್ಡಗೊಂಡು, ಎಲೆಗಳು ತುದಿಯಲ್ಲಿ ಪೊದೆಯಂತೆ ಕಾಣುತ್ತವೆ. ಇಂತಹ ಗಿಡಗಳಲ್ಲಿ ಗೊನೆ ಬಿಡುವುದಿಲ್ಲ. ಎಲೆಗಳು ಒರಟಾಗಿ, ಸಣ್ಣವಿರುತ್ತವೆ. ಗಿಡಗಳ ಕಂದುಗಳು ಗಿಡ್ಡವಿದ್ದು, ಕಪ್ಪಾಗಿ ಸಾಯುತ್ತವೆ. | 1) ನಾಟಿಗಾಗಿ ಉಪಯೋಗಿಸುವ ಕಂದುಗಳು ಬಂಚಿಟಾಪ್ ನಂಜುರೋಗ ಮುಕ್ತವಿರಬೇಕು.<br>2) ರೋಗ ಪೀಡಿತ ಗಿಡಗಳನ್ನು ಗುರುತಿಸಿ, ಕೂಡಲೇ ಬೇರು ಸಹಿತ ತೆಗೆದು, ನಾಶಪಡಿಸಿ ರೋಗ ಹರಡದಂತೆ ಮುಂಜಾಗ್ರತೆ ವಹಿಸಬೇಕು.<br>3) ಬಂಚಿಟಾಪ್ ನಂಜು ರೋಗವನ್ನು ಹರಡುವ ಸಸ್ಯಹೇನುಗಳ (ವಾಹಕ) ನಿಯಂತ್ರಣಕ್ಕಾಗಿ 0.5 ಮಿ.ಲೀ.ಇಮಿಡಾಕ್ಲೋಪ್ರಿಡ್ ಅಥವಾ 1.7 ಮಿ.ಲೀ.ಡೈಮಿಥೋಯೇಟ್ 30 ಇ.ಸಿ.ಕೀಟನಾಶಕಗಳನ್ನು ಸೂಕ್ತ ಪ್ರಮಾಣದಲ್ಲಿ ಪ್ರತಿ ಲೀಟರ್ ನೀರಿನಲ್ಲಿ ಬೆರೆಸಿ ಸಿಂಪಡಿಸಬೇಕು. |
| ವರ್ಣವಿನ್ಯಾಸ ನಂಜು (ಮೊಸಾಯಿಕ್ ನಂಜುರೋಗ) | ರೋಗ ಪೀಡಿತ ಗಿಡಗಳ ಎಲೆಗಳಲ್ಲಿ ಹಸಿರು ಹಾಗೂ ಹಳದಿ ಪಟ್ಟೆಗಳು ಕಂಡು ಬರುತ್ತವೆ. ಹೊಸ ಎಲೆಗಳ ತುದಿ ಒಣಗಿ ಅದು ಕೊಳೆಯಲು ಪ್ರಾರಂಭಿಸುತ್ತದೆ. ಎಲೆಗಳು ಒರಟಾಗಿ, ಗಿಡದ ಬೆಳವಣಿಗೆ ಸ್ಥಗಿತಗೊಳ್ಳುತ್ತದೆ. | 1) ನಾಟಿಗಾಗಿ ಉಪಯೋಗಿಸುವ ಕಂದುಗಳು ಮೊಸಾಯಿಕ್ ರೋಗ ಮುಕ್ತವಾಗಿರಬೇಕು.<br>2) ರೋಗ ಪೀಡಿತ ಗಿಡಗಳನ್ನು ಗುರುತಿಸಿ ಕೂಡಲೇ ನಾಶಪಡಿಸಬೇಕು. |
| ಫ್ರೆಕಲ್ ಎಲೆ ಚುಕ್ಕೆರೋಗ | ಎಲೆ ಹಾಗೂ ಹಣ್ಣುಗಳ ಮೇಲೆ ತೀರ ಚಿಕ್ಕ ಕಂದು ಅಥವಾ ಕಪ್ಪು ಬಣ್ಣದ ಚುಕ್ಕೆಗಳು ಕಂಡು ಬರುತ್ತವೆ. ಎಲೆಗಳು ಒಣಗಿ, ಹಣ್ಣುಗಳು ಪೀಚಾಗಿರುತ್ತವೆ. | ಪ್ರತಿ ಲೀಟರ್ ನೀರಿಗೆ 2.0 ಗ್ರಾಂ. ಮ್ಯಾಂಕೋಜೆಬ್ 75 ಡಬ್ಲ್ಯೂ.ಪಿ. ಅಥವಾ3 ಗ್ರಾಂ. ತಾಮ್ರದ ಆಕ್ಸಿಕ್ಲೋರೈಡ್ 50 ಡಬ್ಲ್ಯೂಪಿ ಬೆರೆಸಿ ಸಿಂಪಡಿಸಬೇಕು. |

| | | |
|---|---|---|
| ದುಂಡುಜಂತು (ನೆಮಟೋಡ್) | ರೋಗ ಪೀಡಿತ ಗಿಡಗಳ ಬೇರುಗಳಲ್ಲಿ ಕಂದು ಬಣ್ಣದ ಕಲೆಗಳು ಕಂಡು ಬಂದು, ಬೇರುಗಳು ಕಪ್ಪಾಗಿ ಸಾಯುತ್ತವೆ. ರಭಸದ ಗಾಳಿಯಿದ್ದಲ್ಲಿ ಗಿಡಗಳು ಬೇರು ಸಹಿತ ನೆಲಕ್ಕುರುಳುತ್ತವೆ. ಗೊನೆಗಳಲ್ಲಿನ ಕಾಯಿಗಳು ಸಣ್ಣದಿರುತ್ತವೆ. | 1) ನಾಟಿಗಾಗಿ ಉಪಯೋಗಿಸುವ ಕಂದುಗಳು ದುಂಡುಜಂತುವಿನಿಂದ ಮುಕ್ತವಾಗಿರಬೇಕು.<br>2) ಪ್ರತಿ ಗುಣಿಗೆ 20 ಗ್ರಾಂ ಕಾರ್ಬೋಫ್ಯುರಾನ್ 3ಜಿ. ಅಥವಾ 10 ಗ್ರಾಂ. ಫೋರೇಟ್ 10ಜಿ. ಹರಳುಗಳನ್ನು ನಾಟಿಗೆ ಮುಂಚೆ ಮಣ್ಣಿನಲ್ಲಿ ಬೆರೆಸಬೇಕು.<br>3) ನಾಟಿಗೆ ಬಳಸುವ ಕಂದುಗಳ ದುಂಡುಜಂತು ನಿರ್ವಹಣೆಗೆ ಮುಂಜಾಗರೂಕತೆಯಾಗಿ ಕಂದುಗಳ/ ಗೆಡ್ಡೆಗಳ ಮೇಲ್ಭಾಗವನ್ನು ಕತ್ತರಿಸಿ. ನಂತರ ಅವುಗಳನ್ನು ಮಣ್ಣು/ಸಗಣಿ ರಾಡಿಯಲ್ಲಿ ಅದ್ದಿ ಅವುಗಳ ಮೇಲೆ 20 ಗ್ರಾಂ ಶೇ.3ರ ಕಾರ್ಬೋಫ್ಯುರಾನ್ ಹರಳುಗಳನ್ನು ಉದುರಿಸಬೇಕು. ಆ ಮೇಲೆ ಗೆಡ್ಡೆಗಳನ್ನು ನೆರಳಿನಲ್ಲಿ ಒಣಗಿಸಿ, ನಾಟಿಗೆ ಬಳಸಬೇಕು. ಇದರಿಂದ ಗಂಟುಬೇರು ಜಂತುರೋಗ ಹತೋಟಿಯಾಗುವುದು.<br>4) ಬೆಳೆ ಕ್ಷೇತ್ರವು ಸಸ್ಯ ದುಂಡುಜಂತುವಿನ ಬಾಧೆಗೊಳಗಾಗಿದ್ದರೆ ಪ್ರತಿ ಗಿಡಕ್ಕೆ 20 ಗ್ರಾಂ ಶೇ.3ರ ಕಾರ್ಬೋಫ್ಯುರಾನ್ ಅಥವಾ ಶೇ. 10ರ ಆಲ್ಡಿಕಾರ್ಬ್ ಹರಳುಗಳನ್ನು ಹಾಕಬೇಕು.<br>5) ಸಸ್ಯ ಜಂತುವಿನ ಬಾಧೆ ಇರುವ ತೋಟಗಳಲ್ಲಿ ಸುತ್ತಲೂ ಚೆಂಡು ಮಲ್ಲಿಗೆ ಹೂವಿನ ಗಿಡಗಳನ್ನು ಬೆಳೆದು ಕಿತ್ತು ನಾಶಪಡಿಸಬೇಕು. ದುಂಡುಜಂತುವಿನ ಬಾಧೆ ಕಡಿಮೆ ಮಾಡಲು ನಾಟಿ ಮಾಡುವುದಕ್ಕಿಂತ 45 ದಿವಸಗಳ ಮೊದಲು ಸೆಣಬನ್ನು ಬಿತ್ತನೆ ಮಾಡಬೇಕು. ನಂತರ ಸೆಣಬಿನ ಬೆಳೆ ಹೂವಾಡುವಾಗ ಉಳುಮೆ ಮಾಡಿ ಮಣ್ಣಿನಲ್ಲಿ ಬೆರೆಸಬೇಕು. ಇದರಿಂದ ದುಂಡುಜಂತುಗಳ ಬಾಧೆಯನ್ನು ಕಡಿಮೆ ಮಾಡಬಹುದು. |
| ತುದಿ ಕೊಳೆಯುವ ರೋಗ | ಮಧ್ಯದ ಎಲೆಯ ತುದಿಯಿಂದ ಕೊಳೆಯುತ್ತಾ ಬರುತ್ತದೆ. | ನಾಟಿ ಮಾಡುವ ಮೊದಲು 3 ಗ್ರಾಂ. ತಾಮ್ರದ ಆಕ್ಸಿಕ್ಲೋರೈಡ್ ಮತ್ತು 0.3 ಗ್ರಾಂ ಸ್ಟ್ರೆಪ್ಟೋಸೈಕ್ಲಿನ್. 3 ಗ್ರಾಂ ತಾಮ್ರದ ಆಕ್ಸಿಕ್ಲೋರೈಡ್ ಮತ್ತು 0.3ಗ್ರಾಂ ಸ್ಟ್ರೆಪ್ಟೋಸೈಕ್ಲಿನ್ ಪ್ರತಿ ಲೀಟರ್ ನೀರಿಗೆ ಬೆರೆಸಿದ ದ್ರಾವಣದಲ್ಲಿ 45 ನಿಮಿಷ ನೆನೆಸಿ ನಾಟಿ ಮಾಡಬೇಕು. ಗಿಡದ ಸುತ್ತಲೂ ಪ್ರತಿ ಲೀಟರ್ ನೀರಿಗೆ ಬೆರೆಸಿ ಪ್ರತಿ ತಿಂಗಳು 3 ಬಾರಿ ಗಿಡದ ಸುತ್ತಲೂ ಸುರಿಯಬೇಕು.<br>ರೋಗ ನಿರೋಧಕ ತಳಿಯಾದ ಏಲಕ್ಕಿಬಾಳೆಯನ್ನು ಬೆಳೆಯುವುದು ಸೂಕ್ತ. |